# ಸುದ್ದಿ ಸಂಚಯ

## ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ವತಿಯಿಂದ ನಡೆಸಲಾಗುತ್ತಿರುವ ಪರಿಹಾರ ಕಾರ್ಯಗಳು

ಅಕ್ಟೋಬರ್ ತಿಂಗಳ ಕೊನೆಯ ವಾರಗಳಲ್ಲಾದ ಅತಿವೃಷ್ಟಿಯಿಂದ **ಪಶ್ಚಿಮ ಬಂಗಾಳದ** ಅನೇಕ ಭಾಗಗಳಲ್ಲಿ ಲಕ್ಷಾಂತರ ಜನರು ನಿರಾಶ್ರಿತರಾಗಿದ್ದಾರೆ. ಅಷ್ಟೇ ಅಲ್ಲದೆ ಕೊಲ್ಕತಾ ಮಹಾನಗರದ ಬಹುಪಾಲು ಜಲಾವೃತವಾಗಿತ್ತು. ರಾಮಕೃಷ್ಣ ಮಿಷನ್, ಕೊಲ್ಕತಾ ಮಹಾನಗರ ಸೇರಿದಂತೆ ಪಶ್ಚಿಮ ಬಂಗಾಳದ ಪೂರ್ವ ಮೇದಿನೀಪುರ, ಹೌರಾ ಹಾಗೂ ದಕ್ಷಿಣ ೨೪-ಪರಗಣ ಜಿಲ್ಲೆಗಳಲ್ಲಿ ವ್ಯಾಪಕ ಪರಿಹಾರ ಕಾರ್ಯವನ್ನು ಕೈಗೊಂಡಿತು. ಪೂರ್ವ ಮೇದಿನೀಪುರದ ಕನ್ಯೆದಿಘಿ, ಕುಮೀರ್ದ, ಬಸಂತಿಯಾ, ಮುಕುಂದಪುರ, ಗೋಪೀನಾಥಪುರ, ಕೊಂಟಾಯ್ ಮಹಾನಗರಪಾಲಿಕೆಯ ನಾಲ್ಕು ವಾರ್ಡ್‌ಗಳು, ಚಂಡೀಪುರದ ಸುತ್ತಮುತ್ತಲಿನ ಎಗ್ರಾ ಉಪವಿಭಾಗದ ಐದು ವಿಭಿನ್ನ ಪ್ರದೇಶಗಳು, ಹೌರಾಜಿಲ್ಲೆಯ ಶಾಂತಿನಗರ, ಬೇಲೂರು ರೈಲ್ವೆ ನಿಲ್ದಾಣದ ಬಳಿಯ ಪಶ್ಚಿಮ ಶಾಂತಿನಗರಗಳಲ್ಲಿ, ದಕ್ಷಿಣ ೨೪-ಪರಗಣ ಜಿಲ್ಲೆಯ ಪುರುಷೋತ್ತಮಪುರ, ಚೆಮಗುಡಿ, ಗಾಯೇನ್ ಬಜಾರ್ ಹಾಗೂ ಕೊಲ್ಕತಾದ ಸುತ್ತಮುತ್ತ ಪ್ರದೇಶಗಳಲ್ಲಿ ಪಾಕಶಾಲೆಗಳನ್ನು ತೆರೆದು ಊಟ (ಕಿಚುಡಿ), ಅವಲಕ್ಕಿ, ಬೆಲ್ಲ, ಸಕ್ಕರೆ ಮುಂತಾದುವುಗಳನ್ನು ಸಾವಿರಾರು ನೆರೆ ಸಂತ್ರಸ್ತರಿಗೆ ನೀಡಲಾಯಿತು.

**ಜಮ್ಮು ಮತ್ತು ಕಾಶ್ಮೀರದಲ್ಲಿ** ಅಕ್ಟೋಬರ್ ೮, ೨೦೦೫ರಂದು ಸಂಭವಿಸಿದ ಮಾರಕವಾದ ಭೂಕಂಪದಿಂದ ತತ್ತರಿಸಿರುವ ಸಂತ್ರಸ್ತರಿಗೆ ಪೂಂಛ್ ಪ್ರದೇಶದಲ್ಲಿ ರಾಮಕೃಷ್ಣ ಮಿಷನ್ ತನ್ನ ಜಮ್ಮುವಿನಲ್ಲಿರುವ ಕೇಂದ್ರದ ಮೂಲಕ ೧೯೨೦ ಕೆ.ಜಿ ಗೋಧಿ ಹಿಟ್ಟು, ೨೫೦೦ ಕೆ.ಜಿ. ಉಪ್ಪು, ೨೦೦೦ ಕೆ.ಜಿ. ಬಿಸ್ಕತ್ತುಗಳು, ೬೨೫ ಕೆ.ಜಿ. ಹಾಲಿನ ಪುಡಿ, ೩೦೦ ಕೆ.ಜಿ. ಸೋಪಿನ ಪುಡಿ, ೩೬೦ ಕೆ.ಜಿ. ಸಾಸಿವೆ ತೈಲ, ೬೦ ಲೀಟರುಗಳು ತುಪ್ಪ, ೪೭೨೫ ಬ್ಲಾಂಕೆಟ್‌ಗಳು, ಬೊಂಬುಗಳೊಡಗೂಡಿದ ೨೫ ಟೆಂಟ್‌ಗಳು, ೧೦೦ ಕೆ.ಜಿ ಪ್ಲಾಸ್ಟಿಕ್ ಶೀಟ್‌ಗಳು, ೬೦ ಫೋಮ್ ಹಾಸಿಗೆಗಳು, ೫ ಡಜನ್ ಲ್ಯಾಂಟರ್ನ್‌ಗಳು, ೩ ಡಜನ್ ಪೆಟ್ರೋಮ್ಯಾಕ್ಸ್‌ಗಳು, ಪುರುಷರಿಗಾಗಿ ೫೦ ಜೊತೆ ಷೂಗಳು, ೫೦ ಜೊತೆ ಮಕ್ಕಳ ಷೂಗಳು ಮುಂತಾದುವುಗಳನ್ನು ವಿತರಿಸಲಾಗಿದೆ. ಪರಿಹಾರ ಕಾರ್ಯದ ಹೆಚ್ಚಿನ ವರದಿಯನ್ನು ನಿರೀಕ್ಷಿಸಲಾಗುತ್ತಿದೆ.

24 ಅಕ್ಟೋಬರ್ 2005 — ಸ್ವಾಮಿ ಸ್ಮರಣಾನಂದ
ಬೇಲೂರು ಮಠ, ಹೌರಾ — ಪ್ರಧಾನ ಕಾರ್ಯದರ್ಶಿ



ಉದ್ಬೋಧನ ಪತ್ರಿಕೆಯ ಸಿ.ಡಿ.ಗಳ ಉದ್ಘಾಟನಾ ಸಮಾರಂಭದ ದೃಶ್ಯ

ದಸರಾದ ದಿನಗಳಂದು ಪಶ್ಚಿಮ ಬಂಗಾಳದಲ್ಲಿ ಆಚರಿಸಲಾಗುವ ದುರ್ಗಾಪೂಜೆಯನ್ನು ಬೇಲೂರು ಮಠದಲ್ಲಿ ಬಹಳ ವೈಭವದಿಂದ ಆಚರಿಸಲಾಯಿತು. ಅಲ್ಲಿ ಪೂಜಿಸಲಾದ ದೇವಿಯ ಮೂರ್ತಿ.



* ೧೦೦ ವರ್ಷಗಳಿಂದಲೂ ಅವಿಚ್ಛಿನ್ನವಾಗಿ ಪ್ರಕಟಗೊಳ್ಳುತ್ತಿರುವ ರಾಮಕೃಷ್ಣ ಮಹಾಸಂಘದ ಏಕೈಕ ಬಂಗಾಳಿ ಮಾಸಪತ್ರಿಕೆಯಾದ ಉದ್ಬೋಧನ ಸಾರಸ್ವತ ಪ್ರಪಂಚಕ್ಕೆ ಒಂದು ಶತಮಾನಕ್ಕೂ ಮೀರಿ ಸಲ್ಲಿಸುತ್ತಿರುವ ಸೇವೆಯನ್ನು ಐತಿಹಾಸಿಕವಾಗಿ ಆಚರಿಸಿತು. **ಉತ್ತರಣ** ಎಂದು ಹೆಸರಿಸಲಾಗಿರುವ ಈ ಪತ್ರಿಕೆಯ ನೂರು ವರ್ಷಗಳ ಅಷ್ಟೂ ಸಂಚಿಕೆಗಳ ಒಟ್ಟು ೭೫,೦೦೦ ಪುಟಗಳನ್ನು ೧೮ ಸಿ.ಡಿಗಳಲ್ಲಿ ಅಡಕಗೊಳಿಸಲಾಗಿದ್ದು ಇವುಗಳ ಬಿಡುಗಡೆಯನ್ನು ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜಿ ನೆರವೇರಿಸಿದರು.

* ಸ್ವಾಮಿ ವಿವೇಕಾನಂದರ ಪೂರ್ವಜರ ಮನೆ ಹಾಗೂ ಸಾಂಸ್ಕೃತಿಕ ಕೇಂದ್ರದ ಪ್ರತಿಷ್ಠಾಪನ ದಿನದ ಪ್ರಥಮ ವಾರ್ಷಿಕೋತ್ಸವದಂದು (ಸೆಪ್ಟೆಂಬರ್ ೨೬, ೨೦೦೫) ಬಂಗಾಳದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬುದ್ಧದೇವ್ ಭಟ್ಟಾಚಾರ್ಯ ಕೇಂದ್ರಕ್ಕೆ ಭೇಟಿ ನೀಡಿದ್ದರು. ಮಕ್ಕಳಿಗಾಗಿ ನಡೆಸಲಾಗುತ್ತಿರುವ ಸಂಜೆಶಾಲೆ ಹಾಗೂ ಇತರೆ ಚಟುವಟಿಕೆಗಳನ್ನೆಲ್ಲ ವೀಕ್ಷಿಸಿ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು. ಬಡಮಕ್ಕಳಿಗಾಗಿ ನಡೆಸಲಾಗುತ್ತಿರುವ ಈ ಸಂಜೆಶಾಲೆಯಲ್ಲಿ ಅಕ್ಷರಾಭ್ಯಾಸ, ಲೆಕ್ಕ, ಚಿತ್ರಕಲೆ ಮುಂತಾದುವುಗಳಲ್ಲಿ ಅನೌಪಚಾರಿಕವಾಗಿ ಶಿಕ್ಷಣ ನೀಡುವುದೇ ಅಲ್ಲದೆ, ಅವರಿಗೆ ತರಗತಿಗಳ ನಂತರ ಹೊಟ್ಟೆ ತುಂಬುವಂತೆ ಪುಷ್ಕಳವಾದ ತಿಂಡಿಯನ್ನೂ ನೀಡಲಾಗುತ್ತಿದೆ.

* ಛತ್ತೀಸ್‌ಘರದ ಬಸ್ತರ್ ಜಿಲ್ಲೆಯಲ್ಲಿರುವ ನಾರಾಯಣಪುರದ ರಾಮಕೃಷ್ಣ ಮಿಷನ್ ಆಶ್ರಮವು ನವೆಂಬರ್ ೯ರಿಂದ ೧೨ರವರೆಗೆ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಶ್ರೀರಾಮಕೃಷ್ಣ ಪ್ರಾರ್ಥನಾ ಮಂದಿರದ ಉದ್ಘಾಟನೆಯನ್ನು ಆಚರಿಸಿತು. ನಾರಾಯಣಪುರದ ಕೇಂದ್ರವು ಕಾಡಿನ ಬುಡಕಟ್ಟು ಜನಾಂಗದ ಸೇವೆಯಲ್ಲಿ ತೊಡಗಿರುವ ಸಂಸ್ಥೆ.